ಆ) ಯಾವ ಯಾವ ಪ್ರದೇಶಗಳಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇ) ಈ ಕಾಮಗಾರಿಗಾಗಿ ಖರ್ಚಾದ ಒಟ್ಟು ವೆಚ್ಚ ವೆಷ್ಟು? (ವರ್ಷವಾರು ಪ್ರದೇಶವಾರು ಮಾಹಿತಿ ನೀಡುವುದು).

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು) :

ವಿವರಗಳು ಕೆಳಕಂಡಂತಿವೆ :

ಅ) 1996-97 - ಇಲ್ಲ
1997-98 - 12,500
1998-99 - 21,500

ಆ) 1996-97 - ಇಲ್ಲ
1997-98 - ಬೆಳಗುಂಬ 'ಸಿ' ಮತ್ತು 'ಡಿ' ದರ್ಜೆ ಭೂಮಿ
1998-99 - ಅ) ದೇವರಾಯನದುರ್ಗ ಮಿಸಲು ಅರಣ್ಯ (ಸತ್ತಿ ಕಲ್ಲು ವಡ್ಡರಳ್ಳಿ ಕಣಿವೆ, ಜನಪನ ಹಳ್ಳಿ ಪ್ರದೇಶಗಳು)
ಆ) ನಾಯಕನ ಕೆರೆ (ದೇವರಾಯನದುರ್ಗ ಮೀಸಲು ಅರಣ್ಯ)

ಇ) ವರ್ಷ	ಪ್ರದೇಶ	ವೆಚ್ಚ (ರೂಗಳಲ್ಲಿ)
1996-97	ಇಲ್ಲ	ಇಲ್ಲ
1997-98	ಬೆಳೆಗುಂಬ 'ಸಿ ಮತ್ತು ಡಿ' ದರ್ಜೆ ಭೂಮಿ	3,47,500-00
1998-99	ಅ) ದೇವರಾಯದುರ್ಗ ಮಿಸಲು ಅರಣ್ಯ (ಸತ್ತಿ ಕಲ್ಲು ವಡ್ಡರಳ್ಳಿ ಕಣಿವೆ, ಜನಪದ ಹಳ್ಳಿ ಪ್ರದೇಶಗಳು)	5,56,000-00
	ಆ) ನಾಯಕನ ಕೆರೆ (ದೇವರಾಯನದುರ್ಗ ಮೀಸಲು ಅರಣ್ಯ)	41,700-00
	ಒಟ್ಟು	9,45,200-00

ಹೆದ್ದಾರಿಗಳ ಬದಿಯಲ್ಲಿರುವ ಡಾಬಗಳು

1340 (1646) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆದ್ದಾರಿಗಳ ಬದಿಯಲ್ಲಿರುವ ದಾಬಾಗಳನ್ನು ತೆರವು ಮಾಡಿಸಬೇಕೆಂದು ನ್ಯಾಯಾಲಯದ ಆದೇಶವಾಗಿದೆಯೇ;

ಆ) ಹಾಗಿದ್ದಲ್ಲಿ, ಆದೇಶವನ್ನು ಜಾರಿಗೊಳಿಸಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಆ) ಆಗಿದೆ.

ಆ) ಜಾರಿಗೊಳಿಸಲು ಕರ್ನಾಟಕ ರಾಜ್ಯ ಹೆದ್ದಾರಿ ಅಧಿನಿಯಮ 1964 ಇದರನ್ವಯ ರಾಜ್ಯ ಪತ್ರದಲ್ಲಿ ರಾಜ್ಯ ಹೆದ್ದಾರಿಗಳು ಕುರಿತು ಕಲಂ 7/2 ಅನ್ವಯ ಅಧಿಸೂಚನೆಗಳನ್ನು ಹೊರಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

ಇ) ಉದ್ಭವಿಸುವುದಿಲ್ಲ.

ಮೈಸೂರು ಕಲಾ ಮಂದಿರದಲ್ಲಿ ದಿನಗೂಲಿ ನೌಕರರನ್ನು ಖಾಯಂ ಗೊಳಿಸುವುದು.

1341 (1647) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಮೈಸೂರಿನ ಕಲಾ ಮಂದಿರದಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವವರು ಯಾರು ಯಾರು?

ಆ) ಇವರುಗಳನ್ನು ಖಾಯಂ ಮಾಡಬೇಕೆಂದು ನ್ಯಾಯಾಲಯದ ಆದೇಶವಾಗಿದೆಯೆ;

ಇ) ಹಾಗಿದ್ದಲ್ಲಿ, ಸರ್ಕಾರ ಇವರುಗಳನ್ನು ಎಂದಿನಿಂದ ಖಾಯಂ ಮಾಡುವುದು?

ಶ್ರೀ ಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು)

1) ಶ್ರೀ ಎಲ್.ಎನ್.ಕುಳ್ಳಯ್ಯ

2) ಶ್ರೀ ಎನ್. ಉದಯಕುಮಾರ್

3) ಶ್ರೀ ಬಿ.ಎಸ್.ರವಿಮೋಹನ್

4) ಶ್ರೀ ಎಸ್. ನಂಜುಂಡಸ್ವಾಮಿ

5) ಶ್ರೀ ಫಯಾಜ್

6) ಶ್ರೀ ಶಿವನಂಜಯ್ಯ

7) ಶ್ರೀ ಪಿ. ರಮೇಶ್

8) ಶ್ರೀ ಎಂ. ದಾಸೇಗೌಡ

9) ಶ್ರೀ ಎಸ್.ದೇವೇಂದ್ರರಾವ್